# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಪುತ್ತೂರು ವಿಭಾಗ

Fax: 08251/235421 Email: dcptr@ksrtc.org
ಮುಕ್ರಂಪಾಡಿ ದರ್ಬೆ ಪುತ್ತೂರು-574202

ಸಂ.ಕರಾಸಾ/ಪುವಿ/ಸಂ/ವಾ/ 1548/2020-21
ದಿನಾಂಕ: 29/09/2020

MANGALORE UNIVERSITY
ಮಂಗಳೂರು ವಿಶ್ವವಿದ್ಯಾನಿಲಯ
Registrar's Office ಕುಲಸಚಿವರಕಚೇರಿ
01 ...
Regn No. 4620

ಕುಲಸಚಿವರು,
ಮಂಗಳೂರು ವಿಶ್ವವಿದ್ಯಾಲಯ ಮಂಗಳ ಗಂಗೋತ್ರಿ,
ಕೊಣಾಜೆ,
ದಕ್ಷಿಣ ಕನ್ನಡ ಜಿಲ್ಲೆ,
ಮಂಗಳೂರು.

ಮಾನ್ಯರೇ,

ವಿಷಯ:- 2020ನೇ ಸಾಲಿನಲ್ಲಿ ವಿತರಿಸುವ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್.
ವಿತರಣೆಗೆ ಸೇವಾಸಿಂಧು ಪೋರ್ಟಲ್ ಬಳಸುವ ಕುರಿತು.

****

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪುತ್ತೂರು ವಿಭಾಗದಿಂದ 2020-21 ನೇ ಸಾಲಿನಲ್ಲಿ ಸಕಾಲ ಸಂಬಂಧಿತ ಸೇವೆಗಳಾದ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್ ಸೇವಾಸಿಂಧು ಪೋರ್ಟಲ್ ಮುಖಾಂತರ ನಿರ್ವಹಿಸಲಾಗುತ್ತದೆ. ಈ ಬಗ್ಗೆ 2020-21ನೇ ಸಾಲಿನ ಪಾಸುಗಳ ವಿತರಣೆ ಮಾಡಬೇಕಾಗಿರುತ್ತದೆ. ಫಲಾನುಭವಿಗಳಿಗೆ ಪಾಸುಗಳನ್ನು ಪಡೆದುಕೊಳ್ಳಲು ಸೇವಾಸಿಂಧು ಪೋರ್ಟಲ್‌ನಲ್ಲಿ (https://serviceonline.gov.in/karnataka/ನಲ್ಲಿ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಅರ್ಜಿಯಲ್ಲಿ ಆಧಾರ್ ನಂಬರ್, ಮೊಬೈಲ್ ನಂಬರ್ ಹಾಗೂ ಅರ್ಜಿಗೆ ಸಂಬಂಧಪಟ್ಟ ಎಲ್ಲಾ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ಅರ್ಜಿಯನ್ನು ಆನ್ ಲೈನ್ ಮುಖಾಂತರ ಸಲ್ಲಿಸಿ ಅಗತ್ಯ ದಾಖಲೆಗಳನ್ನು ಅಪಲೋಡ್ ಮಾಡಿದ್ದಾಗ್ಯೂ ಭೌತಿಕವಾಗಿ ಬಸ್ ಪಾಸುಗಳನ್ನು ಪಡೆಯಲು ಬಂದಾಗ ಆನ್‌ಲೈನ್ ಅರ್ಜಿಯ ಒಂದು ಪ್ರತಿ ಹಾಗೂ ಅಗತ್ಯ ದಾಖಲೆಗಳ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿ ನಿಗದಿತ ಹಣ ಪಾವತಿಸಿ ಪಾಸುಗಳನ್ನು ಪಡೆಯುವುದು. ವಿದ್ಯಾರ್ಥಿ ತಾವು ಬಸ್‌ಪಾಸ್ ಪಡೆಯುವ ಕರಾರಸಾ ಸಂಸ್ಥೆಯ ವಿಭಾಗ ಹಾಗೂ ಘಟಕದ ಹೆಸರನ್ನು ಸರಿಯಾಗಿ ನಮೂದಿಸುವುದು ಹಾಗೂ ಅದೇ ಘಟಕದ ಪಾಸ್ ಕೌಂಟರ್‌ನಲ್ಲಿ ಪಾಸುಗಳನ್ನು ಪಡೆಯುವುದು ತಾವು ಈ ಬಗ್ಗೆ ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಶಾಲಾ/ಕಾಲೇಜು ಮುಖ್ಯಸ್ಥರಿಗೆ ಮಾಹಿತಿ ನೀಡಬೇಕಾಗಿ ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ, ಪುತ್ತೂರು ವಿಭಾಗ.

G7 6/10

GEN

12/10/20

ಫ್ಯಾಕ್ಸ್/Fax : 0824-2287424
ಇ-ಮೇಲ್: genmu2015@gmail.com

0824-2287260 (ಸಾರ್ವತ್ರಿಕ ವಿಭಾಗ)
ವೆಬ್‌ಸೈಟ್: mangaloreuniversity.ac.in

# ಮಂಗಳೂರು ವಿಶ್ವವಿದ್ಯಾನಿಲಯ

# MANGALORE UNIVERSITY

**(Accredited by NAAC with 'A' Grade)**

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ – 574 199

Office of the Registrar
Mangalagangothri -574 199

ಕ್ರಮಾಂಕ:ಮಂವಿ/ಸಾವಿ/ಸಕಾಲ ಸೇವೆ/2019-20/ಜ3

ದಿನಾಂಕ 03.11.2020

ರಿಗೆ:

1) ಅಧ್ಯಕ್ಷರು/ ಸಂಯೋಜಕರು, ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2) ನಿರ್ದೇಶಕರು (ಪ್ರಭಾರ), ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ, ಕುಶಾಲನಗರ ಹೋಬಳಿ, ಚಿಕ್ಕ ಅಳುವಾರ, ಸೋಮವಾರಪೇಟೆ ತಾಲೂಕು, ತೊರೆನೂರು – 571 232.
3) ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು/ ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು/ಫೀ.ಮಾ.ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ/ ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ/ ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ.
4) ಪ್ರಾಂಶುಪಾಲರು, ಎಲ್ಲಾ ಸ್ವಾಯತ್ತ/ಸಂಯೋಜಿತ ಕಾಲೇಜುಗಳು ಮಂಗಳೂರು ವಿಶ್ವವಿದ್ಯಾನಿಲಯ.

ಮಾನ್ಯರೇ,

ವಿಷಯ: 2020ನೇ ಸಾಲಿನಲ್ಲಿ ವಿತರಿಸುವ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್ ಅರ್ಜಿ ವಿತರಣೆಗೆ ಸೇವಾ ಸಿಂಧು ಪೋರ್ಟಲ್ ಬಳಸುವ ಕುರಿತು.

ಉಲ್ಲೇಖ: ವಿಭಾಗೀಯ ನಿಯಂತ್ರಣಾಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಪುತ್ತೂರು ವಿಭಾಗ, ಇವರ ಪತ್ರ ಸಂ:ಕರಾಸಾ/ಪುವಿ/ಸಂ/ವಾ/1548/2020-21 ದಿ: 29.09.2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ನೀಡುವ 2020-21ನೇ ಸಾಲಿನಲ್ಲಿ ಸಕಾಲ ಸಂಬಂಧಿತ ಸೇವೆಯಾದ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್‌ನ್ನು ಸೇವಾ ಸಿಂಧು ಪೋರ್ಟಲ್ ಮುಖಾಂತರ ನಿರ್ವಹಿಸುವುದರಿಂದ ವಿದ್ಯಾರ್ಥಿಗಳು ಬಸ್ ಪಾಸುಗಳನ್ನು ಪಡೆದುಕೊಳ್ಳಲು ಸೇವಾ ಸಿಂಧು ಪೋರ್ಟಲ್‌ನಲ್ಲಿ (https://serviceonline.gov.in/karnataka) ನಲ್ಲಿ ಅರ್ಜಿಗಾಗಿ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ ಹಾಗೂ ಅರ್ಜಿಗೆ ಸಂಬಂಧಪಟ್ಟ ಎಲ್ಲಾ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ. ಸದರಿ ವಿಷಯವನ್ನು ವಿದ್ಯಾರ್ಥಿಗಳ ಗಮನಕ್ಕೆ ತರುವ ಸಲುವಾಗಿ ಕ.ರಾ.ರ.ಸಾ.ನಿಗಮದ ಉಲ್ಲೇಖಿ ಪತ್ರದ ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಲಗತ್ತಿಸಿದೆ. ಈ ಸೌಲಭ್ಯದ ಸದುಪಯೋಗವನ್ನು ಪಡೆದುಕೊಳ್ಳುವುದು.

ತಮ್ಮ ವಿಶ್ವಾಸಿ,

3/11

ಕುಲಸಚಿವರು

ಪ್ರತಿ: ವಿಶೇಷ ಕರ್ತವ್ಯ ಅಧಿಕಾರಿ, ಕುಲಪತಿಯವರ ಕಾರ್ಯಾಲಯ/ಕುಲಸಚಿವರ ಆಪ್ತ ಸಹಾಯಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.